**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.**

ದಿನಾಂಕ 25 ನೇ ಮಾರ್ಚ್ 2026 ನೇ ಇಸವಿ

**ಕ್ರಿಮಿನಲ್ ಮೊಕದ್ದಮೆ ಕ್ರಮಾಂಕಃ 1235/2025**

ರಾಜ್ಯ ಸರ್ಕಾರದ ಪರವಾಗಿ
ಠಾಣಾಧಿಕಾರಿ,
ಕಾರ್ಕಳ ನಗರ ಪೊಲೀಸ್ ಠಾಣೆ,
ಉಡುಪಿ ಜಿಲ್ಲೆ. ... ಪಿರ್ಯಾದುದಾರರು

- ವಿರುದ್ಧ -

ಅಶೋಕ್ ಶೆಟ್ಟಿ,
ಪ್ರಾಯಃ 47 ವರ್ಷ,
ತಂದೆಃ ಸೀತಾರಾಮ ಶೆಟ್ಟಿ,
ವಾಸಃ ನಂ.171/9, ವಿಷ್ಣೇಶ್ ಟವರ್,
ರಥಬೀದಿ, ಕಸಬಾ ಗ್ರಾಮ,
ಕಾರ್ಕಳ ತಾಲೂಕು. ... 1 ನೇ ಆರೋಪಿ

ರಾಮರ್,
ಪ್ರಾಯ 42 ವರ್ಷಗಳು,
ತಂದೆಃ ವೇಲ್ ನಾಡರ್,
ವಾಸಃ ನಂ.3/2, ಆಮಾನ್ ಕೋವಿಲ್ ಸ್ಟ್ರೀಟ್,
ನಡುವಿಲೈ, ಈಡಯಾನಕುಲಂ ತಿರುವಲ್ಲೈ
ತಮಿಳುನಾಡು. ... 2 ನೇ ಆರೋಪಿ

**ದೋಷಾರೋಪಣೆ**

ಶ್ರೀಮತಿ ಕೋಮಲ ಆರ್. ಸಿ., ಬಿ.ಎ., ಎಲ್ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಈ ಮೇಲ್ಕಂಡ ನಿಮ್ಮನ್ನು ಕೆಳಕಂಡಂತೆ ದೋಷಾರೋಪಿಸುತ್ತೇನೆ.

1 ನೇ ಆರೋಪಿಯಾದ ನೀವು ಕಾರ್ಕಳ ತಾಲೂಕು ಕಸಬಾ ಗ್ರಾಮದ ಕಿಂಗ್ಸ್ ಬಾರನ್ನು ಲೀಸ್ ಆಗ್ರಿಮೆಂಟ್‌ನಲಿ ಪಡೆದುಕೊಂಡು ವ್ಯವಹಾರ ನಡೆಸುತ್ತಿದ್ದು ದಿನಾಂಕ.04.04.2024 ರಂದು ಬೆಳಿಗ್ಗೆ, 7.20 ಗಂಟೆಗೆ 2 ನೇ ಆರೋಪಿಯೊಂದಿಗೆ ಸೇರಿ ತಕ್ಷೀರು ಮಾಡುವ ಸಮಾನ

ಉದ್ದೇಶದಿಂದ ಕಾರ್ಕಳ ತಾಲೂಕು ಕಸಬಾ ಗ್ರಾಮದ ಕಿಂಗ್ಸ್ ಬಾರ್ ನ ಹೊರಗಡೆಯಲ್ಲಿ ಬಾರ್‌ನ ಪರವಾನಿಗೆಯ ನಿಯಮಗಳನ್ನು ಉಲ್ಲಂಘಿಸಿ ಅಕ್ರಮವಾಗಿ ವಿವಿಧ ಕಂಪೆನಿಯ ಸುಮಾರು 4215/- ರೂ ಮೌಲ್ಯದ ಮದ್ಯದ ಬಾಟಲಿ ಹಾಗೂ ಸ್ಯಾಚೇಟ್ ಗಳನ್ನು ಶೇಖರಣೆ ಮಾಡಿ ಸ್ವಾದೀನ ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 32, 34 ಮತ್ತು 36(ಬಿ) ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣಗಳಿಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯ ವಿವರಣೆಯನ್ನು ಆಪಾದಿತನಿಗೆ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಓದಿ ಹೇಳಿ, ವಿವರಿಸಿ ನಂತರ ಅವರು ನೀಡಿದ ಯಥಾವತ್ ಹೇಳಿಕೆಯನ್ನು ಬರೆದುಕೊಳ್ಳಲಾಯಿತು).

(ಕೋಮಲ ಆರ್. ಸಿ)
ಪ್ರ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ.,
ಕಾರ್ಕಳ.